# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-6483/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 27/03/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ರಾಮಚಂದ್ರ ತಂದೆ ಗೋವಿಂದ, ಹಂಗಳೂರು ಗ್ರಾಮ ಮತ್ತು ಅಂಚೆ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ರಾಮಚಂದ್ರ ಇವರು ಗೌರವಾನ್ವಿತ ಉಪಲೋಕಾಯುಕ್ತರ ಉಡುಪಿ ಕ್ಯಾಂಪ್ ಸಂದರ್ಭದಲ್ಲಿ ದೂರನ್ನು ಸಲ್ಲಿಸಿದ್ದು, ಅದರಲ್ಲಿ ಬಿಜಾಡಿ ಗ್ರಾಮದ ಜನತಾ ಕಾಲೋನಿ ಹತ್ತಿರ ಸರ್ವೆ ನಂ.308/8 ರ 0.55 ಎಕರೆ ಸ್ಥಳದಲ್ಲಿ ಯಾವುದೇ ಅನುಮತಿ ಇಲ್ಲದೇ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸಮುದ್ರ ಕೊರೆತ ನಿಯಂತ್ರಣ ಉಪ-ವಿಭಾಗ ಉಡುಪಿ ಇವರು ಸುಮಾರು 87 ಮೀಟರ್ ಉದ್ದ, 4 ಮೀಟರ್ ಅಗಲ ಹಾಗೂ 5 ಅಡಿ ಆಳದ ನೀರಿನ ತೋಡು ರಚನೆ ಮಾಡಿ ಯಾವುದೇ ಪರಿಹಾರ ನೀಡಿರುವುದಿಲ್ಲ. ಆದ್ದರಿಂದ, ಎದರುದಾರರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಗೌರವಾನ್ವಿತ ಉಪಲೋಕಾಯುಕ್ತರಿಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸಮುದ್ರ ಕೊರೆತ ನಿಯಂತ್ರಣ ಉಪ-ವಿಭಾಗ ಉಡುಪಿ ರವರು ಕಾನೂನು ಪ್ರಕಾರ ಸೂಕ್ತ ಕ್ರಮ ತೆಗೆದುಕೊಂಡು 3 ತಿಂಗಳು ಒಳಗಾಗಿ ವರದಿ ಸಲ್ಲಿಸುವುದಾಗಿ ಮುಚ್ಚಳಿಕೆಯನ್ನು ನೀಡಿರುತ್ತಾರೆ.

3. ದಿನಾಂಕ: 1-9-2014ರ ವರದಿಯನ್ನು ಸದರಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸಮುದ್ರ ಕೊರೆತ ನಿಯಂತ್ರಣ ಉಪ-ವಿಭಾಗ ಉಡುಪಿ ಇವರು ಸಲ್ಲಿಸಿದ್ದು, ಅದರಲ್ಲಿ ಸ್ಥಳ ತನಿಖೆಯನ್ನು

ದಿನಾಂಕ: 19-7-2014 ರಂದು ದೂರುದಾರರ ಸಮಕ್ಷಮ ಕೈಗೊಂಡಿದ್ದು, ಆ ಸಮಯದಲ್ಲಿ ಸ್ಥಳೀಯ ವ್ಯಕ್ತಿಗಳು ಕೂಡು ಇದ್ದರು. ಸ್ಥಳದಲ್ಲಿದಂತಹ ತೋಡು ಹಲವಾರು ವರ್ಷಗಳಿಂದ ಇರುವುದಾಗಿ ತಿಳಿದು ಬಂದಿದ್ದು, ಸ್ಥಳೀಯರು ಮತ್ತು ಸ್ಥಳೀಯ ಎಂ.ಎಲ್.ಎ. ಇವರಿಂದ ತಿಳಿದು ಬಂದ ವಿಚಾರ ಏನೆಂದರೆ ಸದರಿ ತೋಡಿಗೆ ಕಟ್ಟಲಾದ ತಡೆಗೋಡೆ ಸಹ ಹಿಂದೆಯೇ ಕಟ್ಟಿರುವುದಾಗಿ ಕಂಡುಬರುತ್ತದೆ ಹಾಗೂ ಇದನ್ನು ಸಾರ್ವಜನಿಕ ಹಿತಾದೃಷ್ಠಿಯಿಂದ ಕಟ್ಟಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಮುಂದುವರೆದು, ದೂರುದಾರರು ತಿಳಿಸಿರುವಂತೆ, ಸದರಿ ತೋಡಿನ ಅಗಲವನ್ನು ಕಡಿಮೆ ಮಾಡಿದ್ದಲ್ಲಿ ಮಳೆ ನೀರು ಸುಗಮವಾಗಿ ಹರಿದು ಹೋಗಲು ತಡೆವುಂಟಾಗುತ್ತದೆ ಎಂದು ಮತ್ತು ಇದರಿಂದ ಅನಾಹುತವಾಗುವ ಸಂದರ್ಭ ಇದೆ ಎಂದು ತಿಳಿಸಿರುತ್ತಾರೆ.

4. ಎದುರುದಾರರ ವರದಿಯ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿರುವ ಅಂಶಗಳನ್ನೇ ಪುನರುಚ್ಚರಿಸಿರುತ್ತಾರೆ.

5. ಎದುರುದಾರರು, ದಿನಾಂಕ: 10-8-2015 ರಂದು ಈ ಸಂಸ್ಥೆಯಿಂದ ಕೋರಿದ ಮಾಹಿತಿ ಬಗ್ಗೆ ಪತ್ರ ಬರೆದು ಕುಂದಾಪುರ ತಾಲ್ಲೂಕಿನ ತಹಶೀಲ್ದಾರರನ್ನು ಸರ್ವೆ ನಂ.308/8 ರಲ್ಲಿದ್ದ ತೋಡಿನ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸುವ ಬಗ್ಗೆ ಕೋರಲಾಗಿದೆ ಎಂದು ತಿಳಿಸಿದ್ದು, ನಂತರ ದಿ: 28-12-2015 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಉಪ-ವಿಭಾಗ, ಉಡುಪಿ ಇವರು ತಮ್ಮ ಪತ್ರದ ಮೂಲಕ ದೂರುದಾರರ ಜಮೀನನ್ನು ಅಳತೆ ಮಾಡಿಸಲಾಗಿದ್ದು, ತಹಶೀಲ್ದಾರ ಕುಂದಾಪುರ ಇವರ ಆದೇಶದಂತೆ ಅಳತೆ ಮಾಡಿ ಸ್ಥಳದ ನಕ್ಷೆಯನ್ನು ತಯಾರಿಸಲಾಗಿರುತ್ತದೆ ಸದರಿ ನಕ್ಷೆಯಲ್ಲಿ ತೋಡು ಇರುವ ಸ್ಥಳವನ್ನು ತೋರಿಸಲಾಗಿದೆ ಎಂದು ತಿಳಿಸಿರುತ್ತಾರೆ. ಸದರಿ ಪತ್ರದಲ್ಲಿ ಹಾಗೂ ನಕಾಶೆಯಲ್ಲಿ ತಿಳಿಸಿರುವಂತೆ ತೋಡು ಮತ್ತು ತಡೆಗೋಡೆ ದೂರುದಾರರ ಜಮೀನು ಸರ್ವೆ ನಂ.308/8 ರಲ್ಲಿ ಇರುವುದಾಗಿ ಕಂಡುಬರುತ್ತದೆ. ಆದ್ದರಿಂದ, ದೂರುದಾರರು ತಿಳಿಸಿರುವಂತೆ ಅವರ ಜಮೀನನ್ನು ತೋಡು ಹಾಗೂ ತಡೆಗೋಡೆ ನಿರ್ಮಾಣದಲ್ಲಿ ಉಪಯೋಗಿಸಿಕೊಂಡಿರುವ ಹಿನ್ನಲೆಯಲ್ಲಿ ಪರಿಹಾರ ನೀಡುವ ನಿಟ್ಟಿನಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಲು ಕೋರಿ ಪತ್ರ ಬರೆಯಲಾಗಿದ್ದು, ಸದರಿ ಪತ್ರಕ್ಕೆ ಉತ್ತರವಾಗಿ ದೂರುದಾರರ ಜಮೀನಿಗೆ ನೀರು ನುಗ್ಗದಂತೆ ತಡೆಗೋಡೆಯನ್ನು ನಿರ್ಮಿಸಲಾಗಿದೆ. ಆದ್ದರಿಂದ ಅವರ ತೊಂದರೆಯನ್ನು ನಿವಾರಿಸಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ, ಪರಿಹಾರ ನೀಡುವ ಬಗ್ಗೆ ತಿಳಿಸಿರುವುದಿಲ್ಲ.

6. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಯನ್ನು, ದೂರುದಾರರ ಪ್ರತ್ಯುತ್ತರವನ್ನು ಹಾಗೂ ಹಾಜರುಪಡಿಸಿರುವ ದಾಖಲೆಯನ್ನು ಪರಿಶೀಲಿಸಲಾಗಿ, ದಿ: 28-12-2015ರ ಸಹಾಯಕ

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಉಪ-ವಿಭಾಗ, ಉಡುಪಿ ಇವರ ಪತ್ರದಲ್ಲಿ ತಿಳಿಸಿರುವಂತೆ ದೂರುದಾರರ ಜಮೀನಿಗೆ ಸಂಬಂಧಿಸಿದಂತೆ ಹಾಗೂ ಜಮೀನಿನ ಪಕ್ಕದಲ್ಲಿರುವ ತೋಡಿಗೆ ಸಂಬಂಧಿಸಿದಂತೆ, ತಾಲ್ಲೂಕು ಭೂಮಾಪಕರು ಕುಂದಾಪುರ ಇವರು ದಿ: 9-10-2015 ರಂದು ಸರ್ವೆ ಕಾರ್ಯವನ್ನು ನಡೆಸಿರುತ್ತಾರೆ ಹಾಗೂ ತಹಶೀಲ್ದಾರ ಕುಂದಾಪುರ ಇವರು ಸದರಿ ಸ್ಥಳ ನಕಾಶೆಯನ್ನು ಹಾಜರುಪಡಿಸಿರುತ್ತಾರೆಂದು ತಿಳಿಸಿರುತ್ತಾರೆ. ಸದರಿ ನಕ್ಷೆಯನ್ನು ಪರಿಶೀಲಿಸಿದಲ್ಲಿ ಸರ್ವೆ ನಂ.308/8 ರಲ್ಲಿ ಸರಾಸರಿ 4 ಮೀಟರ್ ಅಗಲದ ತೋಡು ಇದ್ದು ಸದರಿ ತೋಡಿನ ಎರಡು ಬದಿಯಲ್ಲಿ 0.45 ಮೀಟರ್ ತಡೆಗೋಡೆ ಇರುವುದು ಕಂಡುಬರುತ್ತದೆ. ಇದರಿಂದ, ತೋಡು ಮತ್ತು ತಡೆಗೋಡೆಗಳು ದೂರುದಾರರ ಜಮೀನಿನ ಸರ್ವೆ ನಂ.308/8 ರಲ್ಲಿರುವುದು ಕಂಡುಬರುತ್ತದೆ. ಸದರಿ ಸರ್ವೆ ನಂ.308/8 ರ 0.55 ಎಕರೆ ಜಮೀನು ದರಖಾಸ್ತು ಜಮೀನಾಗಿದ್ದು, ಇದಕ್ಕೆ ದೂರುದಾರರು ತಿಳಿಸಿರುವ ದೂರುದಾರರ ಅತ್ತೆಯಾದ ಶ್ರೀಮತಿ ಸೋಮುಹೆಂಗಸು ಮಾಲೀಕರಾಗಿರುತ್ತಾರೆ ಎನ್ನುವುದು ಕಂಡುಬರುತ್ತದೆ. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸಮುದ್ರ ಕೊರೆತ ನಿಯಂತ್ರಣ ಉಪ-ವಿಭಾಗ ಉಡುಪಿ ಇವರು ದಿ: 19-11-2013 ರಂದು ದೂರುದಾರರಿಗೆ ಪತ್ರ ಬರೆದು ಕುಂದಾಪುರ ತಾಲ್ಲೂಕಿನ ಬಿಜಾಡಿ ಗ್ರಾಮದ ಸರ್ವೆ ನಂ.308/8 ರಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ತೋಡಿನ ಕಾಮಗಾರಿ ಕೈಗೊಂಡಿರುವುದು ಸರಿ ಎಂದು ತಿಳಿಸಿರುವುದು ಕಂಡುಬರುತ್ತದೆ ಹಾಗೂ ಸದರಿ ಪತ್ರವನ್ನು ಹಾಜರುಪಡಿಸಲಾಗಿದೆ. ದೂರುದಾರರು ತಿಳಿಸಿರುವಂತೆ, ಸದರಿ ತೋಡು ಅನಾಧಿಕಾಲದಿಂದಲೂ ಇದೆ ಎಂದು ತೋರಿಸಲು ಎದುರುದಾರರು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ, ಆದರೆ, ಸದರಿ ತೋಡು ದೂರುದಾರರ ಜಮೀನಿನಲ್ಲಿರುವುದು ಮೇಲೆ ಹೇಳಿದ ದಾಖಲೆಗಳಿಂದ ಸ್ಪಷ್ಟಪಡುತ್ತದೆ. ಸದರಿ ತೋಡನ್ನು ನಿರ್ಮಿಸಲು ದೂರುದಾರರ ಅನುಮತಿಯನ್ನು ಪಡೆದಿರುವುದಿಲ್ಲ ಹಾಗೂ ದೂರುದಾರರಿಗೆ ಯಾವುದೇ ಪರಿಹಾರವನ್ನು ನೀಡಿರುವುದು ಕಂಡುಬರುವುದಿಲ್ಲ. ದೂರುದಾರರ ಅತ್ತೆಗೆ ದರಖಾಸ್ತಿನಲ್ಲಿ ಸದರಿ ಜಮೀನು ಬಂದಿರುವ ಬಗ್ಗೆ ಕುಂದಾಪುರ ಸಹಾಯಕ ಕಮೀಷನರ್ ರವರ ಆದೇಶದ ಪ್ರತಿಯಿಂದ ಕಂಡುಬರುತ್ತದೆ (ಸದರಿ ಆದೇಶದ ಪ್ರತಿಯನ್ನು ಹಾಜರುಪಡಿಸಲಾಗಿದೆ).

7. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ದೂರುದಾರರು ತಿಳಿಸಿರುವಂತೆ ಸರ್ವೆ ನಂ.308/8 ರ ಜಮೀನಿನಲ್ಲಿ ಸಣ್ಣ ನೀರಾವರಿ ಇಲಾಖೆಯವರು ತೋಡನ್ನು ನಿರ್ಮಿಸಿ ತಡೆಗೋಡೆಯನ್ನು ಕಟ್ಟಿರುವುದು ಕಂಡುಬರುತ್ತದೆ ಹಾಗೂ ಸದರಿ ಉಪಯೋಗಿಸಿಕೊಂಡಿರುವ ಜಮೀನಿಗೆ ಸೂಕ್ತ ಪರಿಹಾರವನ್ನು ನಿರ್ಧರಿಸಿ ದೂರುದಾರರ ಅತ್ತೆಗೆ ಪರಿಹಾರವನ್ನು ನೀಡಲು ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ**

**ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

28/3/17

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 28/3/17